ಇಂತಹ ಹಿನ್ನೆಲೆಯಲ್ಲೂ, ಮಕ್ಬೂಲ್ ತನ್ನ ಸವತಿ ಮುನೀರಾಳಿಗೆ ನೆರವಾಗುವ ಬಗೆ, ಇಬ್ಬರು ಹೆಣ್ಣುಗಳ ನಡುವೆ ಮೂಡಿದ ಅಂತಃಕರಣದ ಸಂಬಂಧವನ್ನು ತೋರುತ್ತದೆ. ಸವತಿಯರಾಗಿ ಪ್ರತಿಸ್ಪರ್ಧಿಗಳಾಗಿ ನಿಲ್ಲಿಸಿದ ಅಸಾಧಾರಣ ಸಂದರ್ಭದಲ್ಲಿಯೂ, ಮಕ್ಬೂಲ್ ಮತ್ತು ಮುನೀರಾಳ ನಡುವೆ ಬೆಸೆಯುವ ಸಂಬಂಧ, ಹೊಸ ಜಗತ್ತಿನ ಸಾಧ್ಯತೆಯನ್ನು ತೋರುತ್ತದೆ. ಓದಿ ವಿದ್ಯಾವಂತಳಿದ್ದು, ಆರ್ಥಿಕವಾಗಿ ಸಬಲಳಾದ ಮಕ್ಬೂಲ್, ಆ ಮನೆಯಲ್ಲಿ ಆರಂಭವಾದ ಮತ್ತೊಂದು ಅಧಿಕಾರಶಾಹಿಗೆ ಬಲಿಯಾಗದೆ ತನ್ನ ವಸ್ತುಗಳನ್ನು ತೆಗೆದುಕೊಂಡು ಮನೆಯಿಂದ ಹೊರ ನಡೆಯುತ್ತಾಳೆ. ವಿದ್ಯಾಭ್ಯಾಸ ಮತ್ತು ಆರ್ಥಿಕ ಸ್ವಾತಂತ್ರ್ಯ ಮಹಿಳೆಯರಿಗೆ ಆಯ್ಕೆಯ ಸಾಧ್ಯತೆಯನ್ನು ನೀಡುತ್ತದೆ ಎಂದು ಕಾದಂಬರಿ ಸೂಕ್ಷ್ಮವಾಗಿ ತೋರಿಸುತ್ತದೆ.

★★★

'ಪರ್ದಾ ಮತ್ತು ಪಾಲಿಗಮಿ ಕಾದಂಬರಿಯು ಭಾರತದ ಹೆಸರಿಸದ ಒಂದು ಊರಿನಲ್ಲಿಯ ಮುಸ್ಲಿಂ ಕುಟುಂಬದಲ್ಲಿ ನಡೆಯುತ್ತದೆ. ಯಾವ ನಗರ ಎಂಬುದು ಮುಖ್ಯವಾಗುವುದೂ ಇಲ್ಲ, ಕಾರಣ ಕಾದಂಬರಿಯ ಬಹುಭಾಗ ಏರು ಎತ್ತರದ ಗೋಡೆಯೊಳಗಿನ ಮನೆಯಲ್ಲಿ ನಡೆಯುತ್ತೆ' ಎನ್ನುತ್ತಾರೆ ಲಾಹೋರ್ ವಿಶ್ವವಿದ್ಯಾಲಯದ ಪ್ರೊ. ನಂದಾ ಕಿರ್ಮಾನಿ. ಹೊರಜಗತ್ತಿಗೆ ಪ್ರವೇಶವೇ ಇಲ್ಲದೆ ಒಳಾಂಗಣದಲ್ಲಿಯೇ ಬಂಧಿಸಲ್ಪಟ್ಟ ಹೆಣ್ಣುಗಳಿಗೆ ಯಾವ ಊರು, ಕೇರಿ ಆದರೇನು; ಬದಲಿಲ್ಲದ ಕತೆ ಅವಳದು.

ಈ ಕಾದಂಬರಿ, ಕಾಲಾತೀತವಾಗಿ 'ಸ್ಪೇಸ್ ಅಂಡ್ ಟೈಮ್' ಮೀರಿದಂತಿದೆ. ಕಾರಣ ಯಾವ ದೇಶ, ಕಾಲಕ್ಕೂ ಅನ್ವಯವಾಗಬಲ್ಲ ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ಕಟ್ಟಿಟ್ಟ ಹೆಣ್ಣುಗಳ ಕತೆಯಾಗಿದೆ. ಮಹಿಳೆಯರ ಈ ಸಂಕೀರ್ಣ ಸ್ಥಿತಿಯನ್ನು 1944ರ ಭಾರತದಿಂದ ಎತ್ತಿ, ಇಂದಿನ 2021ರ ಅಫ್ಘಾನಿಸ್ತಾನದಲ್ಲಿ ಇಡಬಹುದು. ದೇಶಕ್ಕೆ ಬಂದ ಸ್ವಾತಂತ್ರ್ಯ, ಮಹಿಳೆಯರನ್ನು ಸಂಪ್ರದಾಯದ ಬಿಗಿಮುಷ್ಟಿಯಿಂದೇನೂ ಬಿಡಿಸುವುದಿಲ್ಲ ಎಂಬ ಅರಿವಿನಿಂದ ಇಕ್ಬಾಲುನ್ನೀಸಾ ಈ ಕಾದಂಬರಿ ಬರೆದಿದ್ದರು. ಅಫ್ಘಾನಿಸ್ತಾನದ ಇಂದಿನ ಪರಿಸ್ಥಿತಿ, 'ಒಂದು ದೇಶಕ್ಕೆ ಸ್ವಾತಂತ್ರ್ಯ ಬಂದುದು, ಅಲ್ಲಿಯ ಮಹಿಳೆಯರ ಸರ್ವ ಸ್ವಾತಂತ್ರವನ್ನೂ ಕಿತ್ತುಕೊಳ್ಳಬಲ್ಲದು' ಎಂಬ ಪುರುಷ ಪ್ರಧಾನತೆಯ ವೈಪರೀತ್ಯವನ್ನು ತೋರಿಸುತ್ತಿದೆ. ಶತಮಾನಗಳ ಅಭಿವೃದ್ಧಿಯನ್ನು, ದಶಕದಶಕಗಳ ಹೋರಾಟದಲ್ಲಿ ಹೆಣ್ಣುಮಕ್ಕಳು ಸಾಧಿಸಿದ್ದ ಸ್ವಾತಂತ್ರ್ಯವನ್ನು ಕ್ಷಣದಲ್ಲಿ ಕಸಿದು, ಮತ್ತೆ ಅವರಿಂದ ಎಲ್ಲ ಅವಕಾಶಗಳನ್ನು ಕಿತ್ತುಕೊಂಡು, ಪರದೆಯಲ್ಲಿ ಹಿಡಿದಿಟ್ಟು, ಮನೆಯ ಒಳಗಿನ ಕತ್ತಲ ಲೋಕಕ್ಕೆ ದೂಡಿದ ತಣ್ಣನೆಯ ಕ್ರೌರ್ಯವನ್ನು, ನಮ್ಮ ಕಣ್ಣೆದುರೇ ಇದೇ ವರ್ಷದ ಆಗಸ್ಟ್ ತಿಂಗಳಿನಲ್ಲಿ ಕಂಡೆವು.

ಇದು ಅಲ್ಲೆಲ್ಲೋ ಮುಸ್ಲಿಂ ದೇಶವಾದ ಅಫ್ಘಾನಿಸ್ತಾನದ ಕತೆಯಾಗಿ ಮಾತ್ರ ಉಳಿಯುವುದಿಲ್ಲ. ಮೈಸೂರಿನಲ್ಲಿ ಇದೇ ಆಗಸ್ಟ್ ತಿಂಗಳ ಸಂಜೆ, ಹೆಣ್ಣುಮಗಳೊಬ್ಬಳ ಮೇಲೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಸಾಮೂಹಿಕ ಅತ್ಯಾಚಾರವಾದಾಗ, 'ಅವಳೇಕೆ ಅಲ್ಲಿಗೆ ಹೋಗಿದ್ದಳು?' ಎಂದು ರಾಜಕಾರಣಿಗಳು ಪ್ರಶ್ನಿಸಿದ್ದನ್ನು, ಮೈಸೂರು ವಿಶ್ವವಿದ್ಯಾಲಯದ ಕುಲಪತಿ 'ಹೆಣ್ಣುಮಕ್ಕಳು ಸಂಜೆ ಆರೂವರೆಯ ಮೇಲೆ ಹೊರ ಬರಕೂಡದೆಂದು' ವಿಧಿಸಿದ್ದನ್ನು ನೆನೆಪಿಸಿಕೊಳ್ಳಿ. ಮತ್ತೆ ಹೆಣ್ಣನ್ನೇ ದೂರುವ, ಅವಳ ಸುರಕ್ಷತೆಯ ನೆಪದಲ್ಲಿ ಅವಳನ್ನು ನಿರ್ಬಂಧಿಸುವ ಈ ಪ್ರಯತ್ನಗಳು, ಪಿತೃಪ್ರಧಾನತೆಯ ಸ್ಪಷ್ಟ ರೋಗಲಕ್ಷಣಗಳು. ಯಾವ ದೇಶದಲ್ಲೂ, ಯಾವ ಕಾಲದಲ್ಲೂ ಪುರುಷ ಪ್ರಧಾನತೆಯ ಸಮಾಜ ಹೆಣ್ಣನ್ನು ಕತ್ತಲ ಯುಗಕ್ಕೆ ಮತ್ತೆ ತಳ್ಳಬಲ್ಲದು ಎಂದು ಈ ನೆಲದ ಮಣ್ಣಿನಲ್ಲಿ ಜನ್ಮತಳೆದ ಈ ಸ್ತ್ರೀವಾದಿ ಕಾದಂಬರಿ 'ಪರ್ದಾ & ಪಾಲಿಗಮಿ' ಎಚ್ಚರಿಸುತ್ತದೆ. ಇದೇ ಈ ಕಾದಂಬರಿಯನ್ನು ಕಾಲಾತೀತವಾಗಿಸಿದೆ. ●